# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ/64/ಇ-ಆಡಳಿತ/2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:18.10.2021

## ಜಂಟಿ ಸುತ್ತೋಲೆ

ವಿಷಯ: ಗ್ರಾಮಠಾಣದಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಾಗಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ಆಸ್ತಿಗಳನ್ನು ದಿಶಾಂಕ್ ಆಪ್ ಮೂಲಕ ಅಳತೆ ಮಾಡಿ ನಕ್ಷೆ ತಯಾರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/553/ಗ್ರಾಪಂಅ/2012, ದಿನಾಂಕ:28.12.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂ.ಇ/146/ಎ ಎಸ್ ಡಿ/2013, ದಿನಾಂಕ:14.06.2013
3. ಸರ್ಕಾರದ ಜಂಟಿ ಸುತ್ತೋಲೆ ಸಂಖ್ಯೆ: ಆರ್ ಡಿ/430/ಎಲ್ ಜಿ ಪಿ/2013, ದಿನಾಂಕ: 25.08.2014

*****

ನಗರ ಪ್ರದೇಶದ ಮತ್ತು ಗ್ರಾಮಗಳಲ್ಲಿ ಆಸ್ತಿಗಳ ಹಕ್ಕು ದಾಖಲೆಗಳನ್ನು ಅಳತೆ ಮಾಡಿ ನಿರ್ವಹಿಸುವ ಕಾರ್ಯವ್ಯಾಪ್ತಿಯು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಸೆಕ್ಷನ್ 148 ಮತ್ತು ಭೂಕಂದಾಯ ನಿಯಮಾವಳಿ 196 ರ ನಿಯಮ 82 ಗಳ ಮೇರೆಗೆ ಭೂಮಾಪನ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ.

ಗ್ರಾಮ ಪಂಚಾಯ್ತಿಯು ದಾಖಲೆಗಳಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಲ್ಲಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ದಾಖಲೆಗಳನ್ನು ಕಾಲೋಚಿತಗೊಳಿಸಲು, ವಹಿವಾಟಿಗೆ ಒಳಪಟ್ಟ ಆಸ್ತಿಯು ಭೂಮಾಪನ ಇಲಾಖೆಯ ಮೂಲಕ ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಂಡು ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮಠಾಣ ಪ್ರದೇಶದ ಒಳಗಿನ ಆಸ್ತಿಗಳಿಗೆ ನಮೂನೆ-9 ಮತ್ತು IIಎ ಮತ್ತು ದಿನಾಂಕ:14.06.2013 ರ ಪೂರ್ವದಲ್ಲಿ ಇದ್ದ ಕ್ರಮಬದ್ಧವಲ್ಲದ ಆಸ್ತಿಗಳಿಗೂ ಸಹ ನಮೂನೆ-II ಬಿ ನೀಡಲು ಉಲ್ಲೇಖ 3 ರ ಜಂಟಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಪ್ರಸುತ್ತ ಸಾರ್ವಜನಿಕರ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು IIಎ ಮತ್ತು ನಮೂನೆ-II ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುತ್ತಿದ್ದಾರೆ. ಗ್ರಾಮ ಪಂಚಾಯತಿ ರವರು ವಹಿವಾಟಿಗೆ ಒಳಪಟ್ಟ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಮೋಜಿನಿ ತಂತ್ರಾಂಶಕ್ಕೆ ಆನ್-ಲೈನ್ ಅರ್ಜಿಯನ್ನು ಸಲ್ಲಿಸುತ್ತಾರೆ. ತದನಂತರ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ

ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಬೇಕಾಗಿರುತ್ತದೆ, ಅರ್ಜಿದಾರರು ಅರ್ಜಿ ಶುಲ್ಕ ರೂ. 800/- ಪಾವತಿಸಿದ ನಂತರ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ದಾಖಲೆಗಳೊಂದಿಗೆ ಮಾಹಿತಿಯನ್ನು ಮೋಜಿಣಿ ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗೆ ಸಲ್ಲಿಸುತ್ತಾರೆ.

ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಒಳಗೆ ಬಂದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಸೆಕ್ಷನ್ 95 ರನ್ವಯ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಮಾಡುವ ಅವಶ್ಯಕತೆಯಿರುವುದಿಲ್ಲ. ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಹೊರಗಡೆ ಬಂದಲ್ಲಿ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಆದೇಶ ಕಡ್ಡಾಯವಾಗಿದೆ.

ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ದಾಖಲೆಯ ಆಧಾರದ ಮೇಲೆ ನಮೂನೆ-9 ಮತ್ತು IIಎ ಅಥವಾ ನಮೂನೆ-II ಬಿ ಯನ್ನು ಅರ್ಜಿದಾರರಿಗೆ ಒದಗಿಸಲಾಗುತ್ತಿದೆ.

ಸದರಿ ಪ್ರಕ್ರಿಯೆಯಿಂದ ಹಲವಾರು ಆಡಳಿತಾತ್ಮಕ ಸಮಸ್ಯೆಗಳು ಉಂಟಾಗುತ್ತಿವೆ. ಪ್ರಸುತ್ತ ಅನುಸರಿಸುತ್ತೀರುವ ಪ್ರಕ್ರಿಯೆಯಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಬರುವ ಪ್ರತಿಯೊಂದು ಅರ್ಜಿಗೆ ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಿ ಹಸ್ತಚಾಲಿತ ವರದಿಯನ್ನು ಸಲ್ಲಿಸುತ್ತಿದ್ದಾರೆ. ಹಾಗೂ ಹಲವಾರು ಬಾರಿ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಿದೇ ಅರ್ಜಿಗಳು ಭೂಮಾಪಕರು ಹಂತದಲ್ಲಿ ಬಾಕಿ ಇರುತ್ತವೆ ಹಾಗೂ ಕೆಲವೊಂದು ಸಂದರ್ಭದಲ್ಲಿ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಿದರೂ ಭೂಮಾಪನ ಇಲಾಖೆಯು ಮಾನವ ಸಂಪನ್ಮೂಲದ ಕೊರತೆಯಿಂದಾಗಿ ಅರ್ಜಿಗಳು ಭೂಮಾಪಕರು ಹಂತದಲ್ಲಿ ಬಾಕಿ ಇರುತ್ತವೆ. ಇದರಿಂದಾಗಿ ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ನಿಗಧಿತ ಸಮಯದೊಳಗೆ ನಮೂನೆ-9 ಮತ್ತು IIಎ ಮತ್ತು ನಮೂನೆ-II -ಬಿ ವಿತರಿಸುವ ಪ್ರಗತಿ ಕುಂಟಿತವಾಗಿದೆ.

ಸದರಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಸಾರ್ವಜನಿಕರಿಗೆ ನಿಗಧಿತ ಸಮಯಯೊಳಗೆ ಸೇವೆಯನ್ನು ಒದಗಿಸುವ ಅವಶ್ಯಕತೆಯಿರುತ್ತದೆ. ಅದುದರಿಂದ ಸಾರ್ವಜನಿಕರ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ದಿಶಾಂಕ್ ಆಫ್ ಮೂಲಕ ನಿರ್ವಹಿಸಲು ಕ್ರಮಕೈಗೊಳ್ಳಲು ಸರ್ಕಾರವು ತೀರ್ಮಾನಿಸಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರರವರು ಅಭಿವೃದ್ಧಿ ಪಡಿಸಿರುವ ದಿಶಾಂಕ್ ಆಫ್ ಮೂಲಕ ಡಿಜಟಲೀಕರನಗೊಳಿಸಿದ ಮತ್ತು ಜಿಯೋ ಉಲ್ಲೇಖಿತ ನಕ್ಷೆಗಳನ್ನು ಬಳಸಲು ಉಪಯುಕ್ತವಾಗಿದೆ. ದಿಶಾಂಕ್ ಆಫ್ ಮೂಲಕ ಗ್ರಾಮ ಪಂಚಾಯತಿಯ ಅಧಿಕಾರಿಗಳು ಆಸ್ತಿಗಳು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ವಿವರಗಳು ಲಭ್ಯವಾಗುವುದು. ಮೊಬೈಲ್ ಫೋನ್ ಗಳ ಜಿಪಿಎಸ್‌ನಲ್ಲಿ ಅಂತರ್ಗತ ರೆಸಲ್ಯೂಶನ್ ದೋಷ ಇರುವುದರಿಂದ, ಗ್ರಾಮ ಠಾಣ ಗಡಿಯಲ್ಲಿ ಬರುವ ಮತ್ತು ಗ್ರಾಮ ಠಾಣ ಗಡಿಯ ಬಫರ್ ವಲಯ ಸುತ್ತಲೂ ಬರುವ ಆಸ್ತಿಗಳನ್ನು

ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಲಾಗುವುದು. ಸದರಿ ಪ್ರಕ್ರಿಯೆಯನ್ನು ಅನುಸರಿಸಿದಲ್ಲಿ ಶೇ.80% ಗಿಂತ ಹೆಚ್ಚು ಆಸ್ತಿಗಳಿಗೆ ಭೂಮಾಪಕರು ಭೌತಿಕವಾಗಿ ಸಮೀಕ್ಷೆ ಮಾಡದೇ, ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಮಾಹಿತಿಯನ್ನು ಪಡೆಯಬಹುದಾಗಿದೆ.

ಈ ಕೆಳಗೆ ವಿವರಿಸಿರುವ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತಿಗಳಲ್ಲಿ ಅರ್ಜಿ ಸಲ್ಲಿಸಿ ದಾಖಲೆಗಳನ್ನು ಪಡೆಯುವುದು.

1. ಆಸ್ತಿಗಳು ಗ್ರಾಮಠಾಣ ವ್ಯಾಪ್ತಿಯೊಳಗೆ ಇದೆಯೇ ಎಂಬುದರ ಬಗ್ಗೆ ದಿಶಾಂಕ್ ಆಪ್‌ನ ಮೂಲಕ ಪರಿಶೀಲಿಸಲಾಗುವುದು.
2. ಸಾರ್ವಜನಿಕರು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು IIಎ ಮತ್ತು ನಮೂನೆ-II ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ, ಒಳಪಟ್ಟ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಅರ್ಜಿಯನ್ನು ನಿಗಧಿತ ಅರ್ಜಿ ಶುಲ್ಕದೊಂದಿಗೆ ಗ್ರಾಮ ಪಂಚಾಯತಿಯಲ್ಲೇ ಸಲ್ಲಿಸಬೇಕು.
3. ಅರ್ಜಿದಾರರ ಹೆಸರು, ಫೋಟೋ ಐಡಿ ನಂ. ಮತ್ತು ಫೋಟೋ ಐಡಿ ವಿವರ, ಅರ್ಜಿದಾರರ ವಿಳಾಸ, ಆಸ್ತಿಯ ಚಕ್ಕುಬಂದಿ, ಆಸ್ತಿಯ ವಿಸ್ತೀರ್ಣ ಮತ್ತು ನೋಟೀಸು ನೀಡಬೇಕಾದವರುಗಳ ವಿವರವನ್ನು ಅರ್ಜಿದಾರರಿಂದ ಕೇಳಿ ಗ್ರಾಮ ಪಂಚಾಯತಿರವರು ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿಕೊಳ್ಳುವುದು.
4. ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿದ ವಿವರಗಳನ್ನು ಅರ್ಜಿದಾರರಿಗೆ ಓದಿ ಹೇಳಬೇಕು ಮತ್ತು ಅರ್ಜಿದಾರರು ಯಾವುದೇ ಬದಲಾವಣೆಗಳನ್ನು ಸೂಚಿಸಿದರೆ ಅವುಗಳನ್ನು ದಾಖಲಿಸುವುದು ಹಾಗೂ ಅರ್ಜಿದಾರರಿಂದ ಗ್ರಾಮ ಪಂಚಾಯತಿಗಳಲ್ಲೇ ನಿಗಧಿತ ಅರ್ಜಿ ಶುಲ್ಕವನ್ನು ಪಡೆಯುವುದು.
5. ಈ ಪ್ರಕ್ರಿಯೆಯಲ್ಲಿ ಅನುಸರಿಸಲು ಗ್ರಾಮ ಪಂಚಾಯತಿಯಲ್ಲಿ ಮೇಕರ್ ಮತ್ತು ಚೆಕರ್ ಪರಿಕಲ್ಪನೆಯನ್ನು ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇಲ್ಲದೇ ಇರುವ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳನ್ನು ಮೇಕರ್ ಆಗಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಚೆಕರ್ ಆಗಿ ಕಾರ್ಯನಿರ್ವಹಿಸುವುದು.
6. ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಛಾಯಾಚಿತ್ರವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿಶಾಂಕ್ ಆಪ್ ಲಾಗಿನ್ ಮೂಲಕ ಪರಿಶೀಲಿಸಿ,

ದೃಢೀಕರಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡುವ ಅವಶ್ಯಕತೆಪಿರುವುದಿಲ್ಲ.

7. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಜಿ.ಪಿ.ಎಸ್ ಆಧಾರದ ಮೇಲೆ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಅಥವಾ ಗ್ರಾಮ ಠಾಣದ ಗಡಿಯಲ್ಲಿ ಬರುವುದೆಂಬ ಮಾಹಿತಿಯು ದಿಶಾಂಕ್ ಆಪ್ ನಲ್ಲಿ ಲಭ್ಯವಾಗುವುದು.
8. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬಂದಲ್ಲಿ, ದಿಶಾಂಕ್ ಆಪ್ ನಲ್ಲೀ ವರದಿ ಸೃಜನೆಯಾಗಿ ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾಗುವುದು.
9. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬಂದಲ್ಲಿ, ಅಂತಹ ಅರ್ಜಿಯನ್ನು ಸ್ವಯಂಕೃತವಾಗಿ ಭೂಮಾಪನ ಇಲಾಖೆಯ ಭೂಮಾಪಕರ ದಿಶಾಂಕ್ ಆಪ್ ಲಾಗಿನ್‌ಗೆ ಪರಿಶೀಲನೆ ಹಾಗೂ ದೃಢೀಕರಣಕ್ಕೆ ವರ್ಗಾವಣೆ ಮಾಡಲಾಗುವುದು. ಭೂಮಾಪಕರು ಅಂತಹ ಅರ್ಜಿಗಳ ಸಂಬಂಧಿತ ಆಸ್ತಿ/ಸ್ವತ್ತುಗಳನ್ನು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ದಿಶಾಂಕ್ ಆಪ್ ಮೂಲಕವೇ ವರದಿಯನ್ನು ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುವುದು.
10. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ದಿಶಾಂಕ್ ಆಪ್ ಬಳಸಿ, ಆಸ್ತಿ/ಸ್ವತ್ತು ಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ, ದಿಶಾಂಕ್ ಆಪ್ ಮೂಲಕ ವರದಿಯನ್ನು ಸೃಜಿಸಿ, ಅರ್ಜಿದಾರರ ಅವಗಾಹನೆಗೆ ಸಲ್ಲಿಸಿ, ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಸರಿಯಾಗಿದೆ ಎಂದು ಒಪ್ಪಿದಲ್ಲಿ, ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬರುವುದೆಂಬ ಮಾಹಿತಿಯನ್ನು ದಿಶಾಂಕ್ ಆಪ್ ನಲ್ಲಿ ಸೆರೆಹಿಡಿಯುವುದು.
11. ಒಂದು ವೇಳೆ ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇದ್ದಲ್ಲಿ, ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕೃತಿಯನ್ನು ಸೃಷ್ಟಿಸಿ ಅಂತಹ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಿರಸ್ಕರಿಸಿ, ಅರ್ಜಿದಾರರಿಗೆ ಭೂಮಾಪನ ಇಲಾಖೆಯಿಂದ ಆಸ್ತಿಯ ಸಮೀಕ್ಷೆ ಮಾಡಿಸಿ, ಸರಿಯಾದ ದಾಖಲೆಗಳೊಂದಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ತಿಳಿಸುವುದು.
12. ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬರುವ ಆಸ್ತಿ/ಸ್ವತ್ತು ಗಳಿಗೆ ಭೂಮಾಪಕರು ಸಹ ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಹಾಗೂ ಸದರಿ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಇದೆಯೇ ಎಂಬುದರ ಬಗ್ಗೆ ವರದಿಯನ್ನು ದಿಶಾಂಕ್ ಆಪ್ ನೀಡುವುದು, ಭೂಮಾಪಕರು ಗಳ ವರದಿಯನ್ವಯ ದಿಶಾಂಕ್ ಆಪ್ ನಿಂದ ಇ-ಸ್ವತ್ತು ತಂತ್ರಾಂಶಕ್ಕೆ ಮಾಹಿತಿಯು ಸಲ್ಲಿಕೆಯಾಗುವುದು.

13. ಗ್ರಾಮ ಪಂಚಾಯತಿಗಳಿಂದ ಸಮೀಕ್ಷೆ ಮಾಡಿ ದೃಢೀಕರಿಸಿದ ಶೇ.10% ರಷ್ಟು ಆಸ್ತಿಗಳನ್ನು ಸಂಬಂಧಪಟ್ಟ ಭೂಮಾಪಕರು ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪರಿಶೀಲಿಸಲಾಗುವುದು.

14. ಅರ್ಜಿದಾರರಿಂದ ಅರ್ಜಿ ಶುಲ್ಕ ರೂ. 200/- ಗ್ರಾಮ ಪಂಚಾಯತಿಗಳಲ್ಲೇ ಸ್ವೀಕರಿಸುವುದು.

15. ಕ್ರಮ ಸಂಖ್ಯೆ 9 ರಲ್ಲಿ ವಿವರಿಸಿದಂತೆ, ಆಸ್ತಿಯ/ಸ್ವತ್ತಿನ ಗಡಿಯೂ ಗ್ರಾಮಠಾಣ ವ್ಯಾಪ್ತಿಯ ಗಡಿಯಲ್ಲಿರುವ ಭೂಮಾಪನ ಇಲಾಖೆಯ ಸರ್ವೆಯರ್ ಗಳ ದಿಶಾಂಕ್ ಆಫ್ ಲಾಗಿನ್ ಗೆ ಬರುವ ಅರ್ಜಿಗಳ ಸಂಬಂಧಿತ ಶುಲ್ಕವನ್ನು ಗ್ರಾಮ ಪಂಚಾಯತಿಗಳಿಂದ ಭೂಮಾಪನ ಇಲಾಖೆಗೆ ವರ್ಗಾಯಿಸಲಾಗುವುದು.

16. ಕ್ರಮ ಸಂಖ್ಯೆ 11 ರಲ್ಲಿ ವಿವರಿಸಿದಂತೆ, ಆಸ್ತಿ/ಸ್ವತ್ತು ಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ಅಳತೆ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ ಅಂತಹ ಅರ್ಜಿಗಳನ್ನು ತಿರಿಸ್ಕರಿಸಿ ಅರ್ಜಿ ಶುಲ್ಕವನ್ನು ಗ್ರಾಮ ಪಂಚಾಯತಿಗಳಿಂದ ಅರ್ಜಿದಾರರಿಗೆ ಹಿಂತಿರುಗಿಸುವುದು.

| | |
|---|---|
| (ಎಲ್.ಕೆ ಅತೀಕ್) | (ತುಷಾರ್ ಗಿರಿನಾಥ್) |
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕಂದಾಯ ಇಲಾಖೆ |

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3. ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
5. ನಿರ್ದೇಶಕರು, ಪಂಚಾಯತ್ ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಎಲ್ಲಾ ಪ್ರಾದೇಶಿಕ ಆಯುಕ್ತರು
7. ಎಲ್ಲಾ ಉಪ ವಿಭಾಗಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್ ಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
9. ಎಲ್ಲಾ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಕಾರ್ಯವಿಧಾನ**

ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸುವುದು ಹಾಗೂ ಅರ್ಜಿದಾರರಿಂದ ಅರ್ಜಿ ಶುಲ್ಕ ರೂ. 200/- ಗ್ರಾಮ ಪಂಚಾಯತಿಗಳಲ್ಲೇ ಸ್ವೀಕರಿಸುವುದು

↓

ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಗಳ ದಿಶಾಂಕ್ ಆಪ್ ಲಾಗಿನ್ ಗೆ ವರ್ಗಾಯಿಸಲಾಗುವುದು

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಛಾಯಾಚಿತ್ರವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಿಸುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಜಿ.ಪಿ.ಎಸ್ ಆಧಾರದ ಮೇಲೆ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಅಥವಾ ಗ್ರಾಮ ಠಾಣದ ಗಡಿಯಲ್ಲಿ ಬರುವುದೆಂಬ ಮಾಹಿತಿಯು ಲಭ್ಯವಾಗುವುದು.

↓

ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬಂದಲ್ಲಿ, ದಿಶಾಂಕ್ ಆಪ್ ನಲ್ಲೇ ವರದಿ ಸೃಜನೆಯಾಗಿ ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾಗುವುದು

↓

ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬಂದಲ್ಲಿ, ಅಂತಹ ಅರ್ಜಿಯನ್ನು ಸ್ವಯಂಕೃತವಾಗಿ ಭೂಮಾಪನ ಇಲಾಖೆಯ ಭೂಮಾಪಕರ ದಿಶಾಂಕ್ ಆಪ್ ಲಾಗಿನ್‌ಗೆ ಪರಿಶೀಲನೆ ಹಾಗೂ ದೃಢೀಕರಣಕ್ಕೆ ವರ್ಗಾವಣೆ ಮಾಡಲಾಗುವುದು. ಭೂಮಾಪಕರು ಅಂತಹ ಅರ್ಜಿಗಳ ಸಂಬಂಧಿತ ಆಸ್ತಿ/ಸ್ವತ್ತುಗಳನ್ನು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ದಿಶಾಂಕ್ ಆಪ್ ಮೂಲಕವೇ ವರದಿಯನ್ನು ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ದಿಶಾಂಕ್ ಆಪ್ ಬಳಸಿ, ಆಸ್ತಿ/ಸ್ವತ್ತು ಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ, ದಿಶಾಂಕ್ ಆಪ್ ಮೂಲಕ ವರದಿಯನ್ನು ಸೃಜಿಸಿ, ಅರ್ಜಿದಾರರ ಅವಗಾಹನೆಗೆ ಸಲ್ಲಿಸಿ, ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಸರಿಯಾಗಿದೆ ಎಂದು ಒಪ್ಪಿದಲ್ಲಿ, ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬರುವುದೆಂಬ ಮಾಹಿತಿಯನ್ನು ದಿಶಾಂಕ್ ಆಪ್ ನಲ್ಲಿ ಸೆರೆಹಿಡಿಯುವುದು. ಒಂದು ವೇಳೆ ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇದ್ದಲ್ಲಿ, ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕೃತಿಯನ್ನು ಸೃಷ್ಟಿಸಿ ಅಂತಹ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಿರಸ್ಕರಿಸಿ, ಅರ್ಜಿದಾರರಿಗೆ ಭೂಮಾಪನ ಇಲಾಖೆಯಿಂದ ಆಸ್ತಿಯ ಸಮೀಕ್ಷೆ ಮಾಡಿಸಿ, ಸರಿಯಾದ ದಾಖಲೆಗಳೊಂದಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ತಿಳಿಸುವುದು

ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬರುವ ಆಸ್ತಿ/ಸ್ವತ್ತು ಗಳಿಗೆ ಭೂಮಾಪಕರು ಸಹ ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಹಾಗೂ ಸದರಿ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಇದೆಯೇ ಎಂಬುದರ ಬಗ್ಗೆ ವರದಿಯನ್ನು ದಿಶಾಂಕ್ ಆಪ್ ನೀಡುವುದು, ಭೂಮಾಪಕರು ಗಳ ವರದಿರನ್ವಯ ದಿಶಾಂಕ್ ಆಪ್ ನಿಂದ ಇ-ಸ್ವತ್ತು ತಂತ್ರಾಂಶಕ್ಕೆ ಮಾಹಿತಿಯು ಸಲ್ಲಿಕೆಯಾಗುವುದು.

ಗ್ರಾಮ ಪಂಚಾಯತಿಗಳಿಂದ ಸಮೀಕ್ಷೆ ಮಾಡಿ ದೃಢೀಕರಿಸಿದ ಶೇ.10% ರಷ್ಟು ಆಸ್ತಿಗಳನ್ನು ಸಂಬಂಧಪಟ್ಟ ಭೂಮಾಪಕರು ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪರಿಶೀಲಿಸಲಾಗುವುದು.

## WorkFlow

Citizen Application in eSwathu s/w wherein citizen claims his property is in Gramathana

↓

Application flows to GP Secretary/SDAA login in Dishaank Mobile App & in that goes to PENDING Folder

↓

GP Secretary/SDAA is forced to do disposal in FIFO based on date of application. However GP Secretary/SDAA can visit spot of properties providing in hi login in any serial order.

↓

GP Secretary/SDAA visits spot of property & captures GPS of each vertex of the property and also one GPS standing inside the property. One photograph of property is also captured standing in front of the property and PDOs has to approve the GPS and Photograph of captured by GP Secretary/SDAA in Dishaank Mobile App

↓

Based on the GPS of the property, it goes into one of the following three buckets- 1) Inside Gramathana 2) Outside Gramathana 3) Border Property

↓

For Properties belonging to (1) Inside Gramathana or (2) Outside Gramathana, categories, the software generates report automatically and send it eSwathu and for (3) Border Properties, the application will go to surveyor Login who shall do spot visit & submit –this report-ON DISHAANK itself.

↓

The surveyor, for Border Properties, do the GPS capture again along with photograph just as PDO & submit his clear report or print on whether the property is INSIDE or OUTSIDE Gramathana via DISHAANK App. As per surveyor report, the reply to eSwathu is sent by DISHAANK App.

10% of workdone by PDO on DISHANK APP is verified by surveyor & / or EO TPS as the same application flows to surveyor / Eo TPs for verification.